


|Jai sri Gurudev|

Sri Adichunchunagiri Shikshana Trust(R.)

# SJC INSTITUTE OF TECHNOLOGY

(An autonomous Institution under VTU from 2024-25)

Accrediated by NAAC with A+ Grade & NBA (CSE,ISE,ECE,ME&CV),NIRF(151-300), QS-I Gauge GOLD Rated

Post Box #20, B.B Road, Chickkaballapur - 562101,Karnataka

## Inaugural Function - Invitation

## 4th IEEE International Conference on Knowledge Engineering and Communication Systems

IEEE BANGALORE SECTION | IEEE Student Branch SJC Institute of Technology | IEEE ComSoc IEEE Communications Society

**Date: 24th April 2026, Time: 9:30 AM** **Venue: BGS Conference Hall, AE Block**

### Divine Blessings

His Holiness Jagadguru Padmabhushana

**Sri Sri Sri Dr. Balagangadharanatha Mahaswamiji**

### Divine Presence and Ashirvachana

His Holiness Jagadguru

**Sri Sri Sri Dr. Nirmalanandanatha Mahaswamiji**

President, Sri Adichunchanagiri Mahasamsthana Math

### Presence

**Poojya Sri Sri Mangalanatha Swamiji**

Secretary, Sri Adichunchanagiri Mahasamsthana Math, Chikkaballapur Branch

### Chief Guest

**Dr. Yadati Narahari**

Professor,Indian Institute of Science(IISc), Banglore.

### Keynote/Plenary Talk Speakers

**Dr.Prasant Misra**

Senior Scientist,TCS Research

Chair,IEEE Banglore

**Dr. Thamme Gowda**

Senior Research Scientist

at Microsoft Translator in Redmond, Washington

**Mr. Manjunatha Bachegowda**

Executive Council Member, VTU

**Organising Chair**

**Dr. Bhanumathi S**

Professor & Head

Dept.of ISE, SJCIT

**Finance Chair**

**Mr. Rangaswamy G R**

Administrative Officer

SJCIT, Chikkaballapur

**General Chair**

**Dr. G T Raju**

Principal

SJCIT, Chikkaballapur

***By:- Management, Principal, AO, Deans , HODs, Faculty, Staff & Students***

# GLIMPSES OF ICKECS - 2026





















Computer Science & Design
SJC INSTITUTE OF TECHNOLOGY
4th IEEE INTERNATIONAL CONFERENCE
Knowledge Engineering & Communication Systems
(ICKECS-2026)


ON







# NEWS PAPER CLIPS

ವಿಶ್ವವಾಣಿ
ವಿಶ್ವಾಸವೇ ವಿಶ್ವ

# ಇಂದಿನಿಂದ 4ನೇ ಶೈಕ್ಷಣಿಕ ಮಹಾ ಸಮ್ಮೇಳನ

**ಚಿಕ್ಕಬಳ್ಳಾಪುರ :** ಏ.24,25ರಂದು ಎರಡು ದಿನಗಳ ಕಾಲ ಎಸ್ಜೆಸಿಐಟಿ ಕಾಲೇಜು ಆವರಣದಲ್ಲಿ ಜ್ಞಾನಾಧಾರಿತ ಇಂಜನಿಯರಿಂಗ್ ಮತ್ತು ಸಂವಹನ ವ್ಯವಸ್ಥೆ ಆಧಾರಿತ 4ನೇ ಅಂತಾ ರಾಷ್ಟ್ರೀಯ ಶೈಕ್ಷಣಿಕ ಮಹಾ ಸಮ್ಮೇಳನ ನಡೆಯಲಿದೆ ಎಂದು ಪ್ರಾಂಶುಪಾಲ ಡಾ.ಜಿ.ಟಿ.ರಾಜು ತಿಳಿಸಿದರು.

ನಗರ ಹೊರವಲಯ ಎಸ್ಜೆಸಿಐಟಿ ಆವರಣದಲ್ಲಿನ ಆಡಳಿತ ಭವನದಲ್ಲಿನ ಪ್ರಾಂಶು ಪಾಲರ ಕೊಠಡಿಯಲ್ಲಿ ಗುರುವಾರ ನಡೆಸಿದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಮ್ಮ ಕಾಲೇಜಿನ ಕ್ಯಾಂಪಸ್ ಆದಿಚುಂಚನಗಿರಿ ಸಭಾಂಗಣದಲ್ಲಿ 4ನೇ ವರ್ಷದ ಐಇಇಇ ನಾಲೆಡ್ಜ್ ಇಂಜನಿಯರಿಂಗ್ ಮತ್ತು ಕಮ್ಯುನಿಕೇಷನ್ ಸಿಸ್ಟಮ್ ಎಂ ವಿಷಯದ ಮೇಲೆ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಏ.24 ಮತ್ತು 25ರಂದು ಐಇಇಇ ಸ್ಟುಡೆಂಟ್ ಚಾಪ್ಟರ್ ಎಸ್ಜೆಸಿಐಟಿ ಮತ್ತು ಐಇಇಇ ಕಮ್ಯುನಿಕೇಷನ್ ಸೊಸೈಟಿ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದೆ. ಇದರಲ್ಲಿ ದೇಶವಿದೇಶಗಳ 13ಕ್ಕೂ ಹೆಚ್ಚು ದೇಶಗಳ 365ಕ್ಕೂ ಹೆಚ್ಚು ಸಂಶೋಧನಾರ್ಥಿಗಳು




ಸುದ್ದಿಗೋಷ್ಠಿಯಲ್ಲಿ ಎಸ್ ಜೆಸಿಐಟಿ ಪ್ರಾಂಶುಪಾಲ ಡಾ.ಟಿ.ವಿ.ರಾಜು ಮಾತನಾಡಿದರು.

ಭಾಗಿಯಾಗುತ್ತಿದ್ದಾರೆ ಎಂದು ತಿಳಿಸಿದರು. 4ನೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡನೆಯಾಗಲು 1901 ಮಹಾಪ್ರಬಂಧಗಳು ಸಲ್ಲಿಕೆಯಾಗಿದ್ದು ಈ ಪೈಕಿ 3 ಹಂತದ ಪರಿಶೀಲನೆಯಲ್ಲಿ ಪಾಸಾದ ಅತ್ಯುತ್ತಮವೆನಿಸಿದ ಕೇವಲ 365 ಪ್ರಬಂಧಗಳನ್ನು ಆಯ್ಕೆ ಮಾಡಲಾಗಿದೆ. ಏ.24ರ ಬೆಳಗ್ಗೆ 9.30ಕ್ಕೆ ಎಸ್ಜೆಸಿಐಟಿ ಕ್ಯಾಂಪಸ್ಸಿನಲ್ಲಿ ನಡೆಯುತ್ತಿರುವ 4ನೇ ಅಂತಾರಾಷ್ಟ್ರೀಯ ಸಮ್ಮೇಳನದ ದಿವ್ಯ ಸಾನಿಧ್ಯವನ್ನು ಚುಂಚಶ್ರೀಗಳಾದ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ವಹಿಸಲಿದ್ದು ಮುಖ್ಯ ಅತಿಥಿಗಳಾಗಿ ಐಐಎಸ್ಸಿ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ಯದತಿ ನರಹರಿ, ಬೆಂಗಳೂರಿನ ಟಿಸಿಎಸ್ ಹಿರಿಯ ವಿಜ್ಞಾನಿ ಡಾ. ಪ್ರಶಾಂತ್ ಮಿಶ್ರಾ, ವಾಷಿಂಗ್ಟನ್ ಮೈಕ್ರೋಸಾಫ್ಟ್ ಟ್ರಾನ್ಸ್ಲೇಟರ್ ಡಾ. ತಮ್ಮೇಗೌಡ, ವಿಟಿಯು ಎಕ್ಸಿಕ್ಯೂಟೀವ್ ಕೌನ್ಸಿಲ್ ಮೆಂಬರ್ ಮಂಜುನಾಥ್ ಬಚ್ಚೇಗೌಡ ಭಾಗಿಯಾಗಲಿದ್ದಾರೆ ಎಂದರು. ಈ ಸಮ್ಮೇಳನದಲ್ಲಿ ಸಂಶೋಧಕರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು, ಉದ್ಯಮ ವೃತ್ತಿಪರರು, ಪ್ರಾಧ್ಯಾಪಕರು, ಇತರೆ ಗಣ್ಯರು ಭಾಗಿಯಾಗಲಿದ್ದಾರೆ. ಸ್ಥಳೀಯ ಎಂಜಿನಿಯರಿಂಗ್ ಕಾಲೇಜಿನ ಆಸಕ್ತ ವಿದ್ಯಾರ್ಥಿಗಳು, ಸಂಶೋಧನಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಆಸಕ್ತಿಯುಳ್ಳವರು ಭಾಗವಹಿಸುವ ಮೂಲಕ ಇದರ ಲಾಭ ಪಡೆಯಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಧ್ಯಮ ಸಂಚಾಲಕ ಡಾ.ರಾಜಶೇಖರ್ ಸೇರಿದಂತೆ ಇತರೆ ಪ್ರಾಧ್ಯಾಪಕರು ಇದ್ದರು.

---

# ಎಸ್‌ಜೆಸಿಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ

## ಸಂಶೋಧಕರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಭಾಗಿ | 365ಕ್ಕೂ ಹೆಚ್ಚು ವಿವಿಧ ಮಹಾಪ್ರಬಂಧಗಳ ಮಂಡನೆ

■ ವಿಜಯವಾಣಿ ಸುದ್ದಿಜಾಲ ಚಿಕ್ಕಬಳ್ಳಾಪುರ

ಇಲ್ಲಿನ ಎಸ್‌ಜೆಸಿ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಏ.24ರಿಂದ 25ರವರೆಗೆ ಐಇಇಇ ನಾಲ್ಡೆಜ್ ಇಂಜಿನಿಯರಿಂಗ್, ಕಮ್ಯುನಿಕೇಷನ್ ಸಿಸ್ಟಮ್ಸ್ ಹೆಸರಿನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನಲ್ಲಿ ಪ್ರತಿ ವರ್ಷ 2 ಸಮ್ಮೇಳನಗಳು ನಡೆಯುತ್ತಿದ್ದು, ಜಾಗತಿಕಮಟ್ಟದಲ್ಲಿ ವಿಷಯಗಳ ಮಂಡನೆಗೆ ಸೂಕ್ತ ವೇದಿಕೆ ನಿರ್ಮಿಸಲಾಗುತ್ತಿದೆ. ಅದರಂತೆ ಈ ಬಾರಿಯೂ ಕಾರ್ಯಕ್ರಮಕ್ಕೆ ಭರದ ಸಿದ್ಧತೆ ಕೈಗೊಳ್ಳಲಾಗಿದೆ.ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಖ್ಯಾತ ಸಂಶೋಧಕರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು, ಉದ್ಯಮ ವೃತ್ತಿಪರರು, ಪ್ರಾಧ್ಯಾಪಕರು ಸೇರಿ ಹಲವರು ಭಾಗವಹಿಸಲಿದ್ದು, ಪರಸ್ಪರ ಜ್ಞಾನ ವಿನಿಮಯ, ತಂತ್ರಜ್ಞಾನ ಪ್ರಗತಿಗೆ ಪೂರಕವಾಗುವ ಅನ್ವೇಷಣೆಗಳ ಸಂವಾದಗಳ ವೇದಿಕೆ ನಿರ್ಮಾಣಕ್ಕೆ ಸಹಕಾರಿಯಾಗಲಿದೆ.

**ಸಮ್ಮೇಳನದ ಪ್ರಮುಖ ವಿಷಯ:** ಭಾರತ ಮಾತ್ರವಲ್ಲದೇ ವಿದೇಶಗಳ ಖ್ಯಾತ ಸಂಶೋಧಕರು, ತಜ್ಞರು ಭಾಗವಹಿಸಲಿದ್ದು, ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಯಂತ್ರಕಲಿಕೆ, ಡೇಟಾ ಮೈನಿಂಗ್, ಜ್ಞಾನ ಅನ್ವೇಷಣೆ, ಇಂಟರ್‌ನೆಟ್ ಆಫ್ ಥಿಂಗ್ಸ್, ವೈರ್‌ಲೆಸ್ ಕಮ್ಯುನಿಕೇಷನ್ ನೆಟ್ ವರ್ಕಿಂಗ್, ಕ್ಲೌಡ್ ಕಂಪ್ಯೂಟಿಂಗ್, ಸಂಶೋಧನಾ ಜ್ಞಾನ ವಿನಿಮಯ, ಜ್ಞಾನ ಇಂಜಿಯರಿಂಗ್ ಸಂವಹನ ವ್ಯವಸ್ಥೆಗಳಲ್ಲಿ ವಿಕಸನಗೊಳ್ಳುತ್ತಿರುವ ಸವಾಲುಗಳು, ವಿಕಸನ ವಿಷಯಗಳ ವಿನಿಮಯ ಸೇರಿ ವಿವಿಧ ವಿಚಾರಗಳ ಮಂಡನೆಯಾಗಲಿದೆ.




ಚಿಕ್ಕಬಳ್ಳಾಪುರದ ಎಸ್‌ಜೆಸಿಟಿ ತಾಂತ್ರಿಕ ಕಾಲೇಜು.

**24ರಂದು ಉದ್ಘಾಟನೆ**

ಎಸ್‌ಜೆಸಿ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಏ.24ರಂದು ಸಮ್ಮೇಳನದ ಉದ್ಘಾಟನೆಯು ಆದಿಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನೆರವೇರಲಿದ್ದು, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಪ್ರೊ.ಯದತಿ ನರಹರಿ, ಟಿಸಿಎಸ್ (ಐಇಇಇ) ಹಿರಿಯ ವಿಜ್ಞಾನಿ ಡಾ.ಪ್ರಶಾಂತ್ ಮಿತ್ರ, ಮೈಕ್ರೊಸಾಫ್ಟ್ ಟ್ರಾನ್ಸ್ ಲೇಟರ್ ಇನ್ ರೆಡ್ ಮ್ಯಾಂಡ್, ಹಿರಿಯ ವಿಜ್ಞಾನಿ ತಮ್ಮೇಗೌಡ, ಬೆಳಗಾವಿ ವಿಟಿಯುವಿನ ಎಕ್ಸಿಕ್ಯೂಟೀವ್ ಕೌನ್ಸಿಲರ್ ಮೆಂಬರ್ ಮಂಜುನಾಥ ಬಚ್ಚೇಗೌಡ ಮತ್ತಿತರರು ಭಾಗವಹಿಸಲಿದ್ದಾರೆ.

**25ಕ್ಕೂ ಹೆಚ್ಚು ದೇಶಗಳು**

ಸಮ್ಮೇಳನಕ್ಕೆ ಅಮೆರಿಕ, ಜರ್ಮನಿ, ಇರಾನ್, ಟರ್ಕಿ, ಆಸ್ಟ್ರೇಲಿಯಾ ಸೇರಿ 25ಕ್ಕೂ ವಿದೇಶಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. 365ಕ್ಕೂ ಹೆಚ್ಚು ವಿವಿಧ ಮಹಾಪ್ರಬಂಧಗಳ ಮಂಡನೆಯಾಗಲಿವೆ. ಭಾರತದ ವ್ಯಾಪ್ತಿಯಲ್ಲಿ ದಕ್ಷಿಣ ಭಾಗದಿಂದ ಶೇ.60 ರಷ್ಟು, ಉತ್ತರ ಭಾಗದಿಂದ ಶೇ.40 ವಿದ್ಯಾರ್ಥಿಗಳು ವಿಷಯ ಮಂಡನೆಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಒಂದು ತಿಂಗಳ ಹಿಂದೆಯೇ ಸಮ್ಮೇಳನಕ್ಕೆ ಅಗತ್ಯ ಸಿದ್ಧತೆ ಕೈಗೊಂಡಿದ್ದು, ಸಂಶೋಧಕರು, ತಜ್ಞರಿಂದ ಮಹತ್ವದ ಮಹಾಪ್ರಬಂಧಗಳ ಮೌಲ್ಯಮಾಪನ ನಡೆದಿದೆ. ಮೂವರ ನೇತೃತ್ವದ ಪರಿಶೀಲನಾ ಪ್ರಕ್ರಿಯೆಯಲ್ಲಿ ಸಂಶೋಧಾನಾತ್ಮಕ ಹೊಸ ವಿಷಯಗಳು, ವೈಜ್ಞಾನಿಕ ದೃಢೀಕರಣ, ವಿಶ್ಲೇಷಣೆ ಸೇರಿದಂತೆ ಸಮಗ್ರ ಅಂಶಗಳನ್ನು ಪರಿಗಣಿಸಿ, ಮಂಡನೆಗೆ ಆಯ್ಕೆ ಮಾಡಲಾಗಿದೆ.

### ವೈಜ್ಞಾನಿಕ ಚಿಂತನೆಗಳಿಗೆ ಪೂರಕ



ಡಾ.ಜಿ.ಟಿ.ರಾಜು

ಅಂತಾರಾಷ್ಟ್ರೀಯ ಸಮ್ಮೇಳನವು ಹೊಸ ಮಹತ್ವದ ವಿಚಾರಗಳ ಬಗ್ಗೆ ಬೆಳಕು ಚೆಲ್ಲುವುದರ ಜತೆಗೆ ವೈಜ್ಞಾನಿಕ ಚಿಂತನೆಗಳ ಬೆಳವಣಿಗೆಗೆ ಪೂರಕವಾದ ಮಾರ್ಗದರ್ಶನ ನೀಡಲಿದೆ ಎಂದು ಎಸ್‌ಜೆಸಿಟಿ ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಟಿ.ರಾಜು ತಿಳಿಸಿದ್ದಾರೆ. ಇಲ್ಲಿನ ಎಸ್‌ಜೆಸಿಟಿ ಕಾಲೇಜಿನಲ್ಲಿ ಸಮ್ಮೇಳನದ ಬಗ್ಗೆ ಮಾಹಿತಿ ನೀಡಿದ ಅವರು, ಹೊಸ ಮಹಾಪ್ರಬಂಧಗಳ ಮಂಡನೆಯ ವೈಶಿಷ್ಟ್ಯತೆ, ವಿವಿಧ ಹಂತಗಳು, ಪ್ರಮುಖಾಂಶಗಳ ಸಂಗ್ರಹಣೆ, ಜಾಗತಿಕಮಟ್ಟದಲ್ಲಿ ಚರ್ಚೆ ಸೇರಿ ಉಪಯುಕ್ತರ ವಿಚಾರಗಳ ಬಗ್ಗೆ ಪರಿಣಾಮಕಾರಿ ಮಾರ್ಗದರ್ಶನ ನೀಡಲಿದೆ. ಸಂಶೋಧಕರು, ತಜ್ಞರೊಂದಿಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಸಿಗಲಿದೆ ಎಂದು ತಿಳಿಸಿದರು. ಕಾಲೇಜಿನ ಆಡಳಿತಾಧಿಕಾರಿ ಡಾ.ಜಿ.ಆರ್.ರಂಗಸ್ವಾಮಿ ಮತ್ತಿತರರು ಇದ್ದರು.

ನಾಲೆಡ್ಜ್ ಎಂಜಿನಿಯರಿಂಗ್, ಕಮ್ಯುನಿಕೇಷನ್ ಸಿಸ್ಟಮ್ಸ್ ಎಐ ಸುಸ್ಥಿರತೆ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ತೆರೆ

# ಮಾನವನ ವಿಕಾಸ ತಂತ್ರಜ್ಞಾನದ ಗುರಿಯಾಗಲಿ: ಡಾ.ರೂಪಾ

■ **ಉದಯವಾಣಿ ಸಮಾಚಾರ**

**ಚಿಕ್ಕಬಳ್ಳಾಪುರ:** ಎಐ ತಂತ್ರಜ್ಞಾನ ದಿನ ನಿತ್ಯ ಜೀವನದಲ್ಲಿ ಹೆಚ್ಚು ಬಳಕೆಯಾದರೂ ಬಹು ಮುಖ್ಯ ನಿರ್ಧಾರಗಳಲ್ಲಿ ಮಾನವನ ಜ್ಞಾನ ಚಿಂತನೆಗಳೆ ಬಹು ಮುಖ್ಯವಾಗುತ್ತವೆ ಎಂದು ಬೆಂಗಳೂರಿನ ಖ್ಯಾತ ಇಸ್ರೋ ವಿಜ್ಞಾನಿ ಡಾ.ರೂಪಾ ತಿಳಿಸಿದರು.

ನಗರದ ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಸಮಾರೋಪಗೊಂಡ ಎರಡು ದಿನಗಳ 4ನೇ ಐಇಇಇ ನಾಲೆಡ್ಜ್ ಎಂಜಿನಿಯರಿಂಗ್ ಮತ್ತು ಕಮ್ಯುನಿಕೇಷನ್ ಸಿಸ್ಟಮ್ಸ್ ಎಂಬ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು.

ಸ್ಯಾಟಲೈಟ್ ತಂತ್ರಜ್ಞಾನ ರೈತರಿಗೆ ಅರಣ್ಯ ರಕ್ಷಣೆಗೆ ಬಾಹ್ಯಾಕಾಶ ಸಂಶೋಧನೆ, ಮೀನುಗಾರರಿಗೆ ವೋಷ್ಯನ್ ಸ್ಯಾಟ್ ಮೂಲಕ ಹೆಚ್ಚಿನ ಸಂಪಾದನೆಗೆ, ಗ್ಲೋಬಲ್ ವಾರ್ಮಿಂಗ್ ಸೂಚನೆಗೆ ವಿವಿಧ ತಂತ್ರಜ್ಞಾನ ರೂಪಿಸಿದರೆ ಸಹಕಾರಿ ಆಗುತ್ತದೆ ಎಂದ ಅವರು, ತಂತ್ರಜ್ಞಾನದ ಅಭಿವೃದ್ಧಿಗೆ ಮಾನವನ ವಿಕಾಸದ ಗುರಿ ಹೊಂದಿರಬೇಕೆಂದರು.

**ಆವಿಷ್ಕಾರ ಪ್ರಗತಿಗೆ ಪೂರಕ:** ಛತ್ತೀಸ್‌ಘಡದ ರಾಯ್‌ಪುರನ ಐಐಐಟಿ ಡಾ.ಕೆ.ಜಿ.ಶ್ರೀನಿವಾಸ ಮಾತನಾಡಿ, ಎಐ ತಂತ್ರಜ್ಞಾನವನ್ನು ನಾವು ವ್ಯವಸ್ಥಿತ ರೀತಿಯಲ್ಲಿ ಬಳಸಿ ಜ್ಞಾನ ಬೆಳವಣಿಗೆ, ಸಮಾಜಕ್ಕೆ ಪೂರಕವಾಗುವ ತಂತ್ರಜ್ಞಾನ ರೂಪಿಸಬೇಕು. ಯಾವುದೇ ಹೊಸ ಸಂಶೋಧನೆ, ಆವಿಷ್ಕಾರ, ಪ್ರಗತಿಗೆ ಪೂರಕವಾಗಿರಬೇಕೆಂದರು.

ಬೆಂಗಳೂರಿನ ಯುವಿಸಿಇಯ ಇಸಿ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಪಿ.ಹರೀಶ್ ಮಾತನಾಡಿ, ಕಮ್ಯೂನಿಕೇಷನ್ ಸಿಸ್ಟಮ್ಸ್ ಎಂಬುದು ಸಮಗ್ರ ವ್ಯವಸ್ಥೆಯಲ್ಲಿ ಸಂಪರ್ಕಿಸುವ ಮಾಧ್ಯಮ. ಮಾನವನ ಮಾದರಿ ಜೀವನ ಶೈಲಿ ಬೆಳವಣಿಗೆಗೆ, ಕಡಿಮೆ ಶಕ್ತಿ ಸಂಪನ್ಮೂಲ ಬಳಸುವ ತಂತ್ರಜ್ಞಾನದೊಂದಿಗೆ ಗ್ರಾಮೀಣ ವ್ಯವಸ್ಥೆಗೆ ಪರಿಸರ ಸಂರಕ್ಷಣೆಗೆ ಸಹಕಾರಿ ಆಗುತ್ತದೆ ಎಂದರು.

ಬೆಂಗಳೂರಿನ ಐಇಇಇನ ಡಾ.ಚಿಂಗಪ್ಪ ಮಾತನಾಡಿ, ಕಮ್ಯೂನಿಕೇಷನ್ ಸಿಸ್ಟಮ್ ಎಂಬುದು ಸಮಗ್ರ ವ್ಯವಸ್ಥೆಯಲ್ಲಿ ಸಂಪರ್ಕಿಸುವ ಮಾಧ್ಯಮ. ಮಾನವನ ಮಾದರಿ ಜೀವನ ಶೈಲಿ ಬೆಳವಣಿಗೆಗೆ, ಕಡಿಮೆ ಶಕ್ತಿ ಸಂಪನ್ಮೂಲ ಬಳಸುವ ತಂತ್ರಜ್ಞಾನದೊಂದಿಗೆ ಗ್ರಾಮೀಣ ವ್ಯವಸ್ಥೆಗೆ ಪರಿಸರ ಸಂರಕ್ಷಣೆಗೆ ಸಹಕಾರಿ ಆಗುತ್ತದೆ ಎಂದರು.

ಬೆಂಗಳೂರಿನ ಎಎಂಎಲ್ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಸತೀಶ್ ಬಾಬು ಮಾತನಾಡಿ, ಎಐ ಸುಸ್ಥಿರತೆ ನಾವು ಹೇಗೆ ಬಳಕೆ ಮಾಡುತ್ತೇವೆ. ನಾವು ದಿನ ನಿತ್ಯ ಜೀವನದಲ್ಲಿ ಬಳಸಿಕೊಳ್ಳುವ ರೀತಿಯಲ್ಲಿರುತ್ತದೆ. ಆದರೂ ನಾವು ಎಐ ತಂತ್ರಜ್ಞಾನ ಬಹಳ ಎಚ್ಚರಿಕೆಯಿಂದ ಬಳಸಬೇಕೆಂದರು.

ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಆ್ಯಂಡ್ ಟೆಲಿಕಮ್ಯೂನಿಕೇಷನ್, ಆರ್.ವಿ.ಸಿ.ಇ ವಿಭಾಗದ ಪಿ.ನಾಗರಾಜ್ ಮಾತನಾಡಿ, ಪ್ರಸ್ತುತ ಪಠ್ಯಕ್ರಮಗಳಲ್ಲಿ ಸಂಶೋಧನಾ ಮಾದರಿಗಳನ್ನು ಹೆಚ್ಚು ಬಳಸಿದ್ದಲ್ಲಿ ಉತ್ತಮ ಸಂಶೋಧನೆಯಿಂದ ಸುಸ್ಥಿರತೆ ಕಾಪಾಡುತ್ತದೆ ಎಂದರು. ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಎಸ್‌ಜೆಸಿಐಟಿ ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಟಿ.ರಾಜು, ಆಡಳಿತಾಧಿಕಾರಿ ಜಿ.ಆರ್.ರಂಗಸ್ವಾಮಿ ಸೇರಿ ದೇಶ, ವಿದೇಶಗಳಿಂದ ಆಗಮಿಸಿದ್ದ ಸಂಶೋಧಕರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು, ಉದ್ಯಮ ವೃತ್ತಿಪರರು, ಪ್ರಾಧ್ಯಾಪಕರು ಭಾಗವಹಿಸಿದ್ದರು.




ಚಿಕ್ಕಬಳ್ಳಾಪುರದ ಎಸ್‌ಜೆಸಿಐಟಿ ಕಾಲೇಜಿನಲ್ಲಿ ನಡೆದ ನಾಲೆಡ್ಜ್ ಎಂಜಿನಿಯರಿಂಗ್ ಮತ್ತು ಕಮ್ಯುನಿಕೇಷನ್ ಸಿಸ್ಟಮ್ಸ್ ಎಂಬ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ವಿಜ್ಞಾನಿಗಳ ತಂಡ.

ಸಂಜೆ ಸಮಾಚಾರ್

# ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ

ಚಿಕ್ಕಬಳ್ಳಾಪುರ : ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 4ನೇ ಐಇಇಇ ನಾಲೆಡ್ಜ್ ಇಂಜಿನಿಯರಿಂಗ್ ಮತ್ತು ಕಮ್ಯುನಿಕೇಷನ್ ಸಿಸ್ಟಮ್ಸ್ ಜ್ಞಾನ ಇಂಜಿನಿಯರಿಂಗ್ ಸಂವಹನ ವ್ಯವಸ್ಥೆಗಳು ಎಂಬ ಅಂತರರಾಷ್ಟ್ರೀಯ ಸಮ್ಮೇಳನವನ್ನು ಏಪ್ರಿಲ್ 24.2026 ಮತ್ತು 25.2026 ರಂದು ಐಇಇಇ, ಬೆಂಗಳೂರು, ಐಇಇಇ ಸ್ಟುಡೆಂಟ್ ಚಾಪ್ಟರ್ ಎಸ್.ಜೆ.ಸಿ.ಐ.ಟಿ ಮತ್ತು ಐಇಇಇ ಕಮ್ಯುನಿಕೇಷನ್ ಸೊಸೈಟಿ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದೆ ಪ್ರಾಂಶುಪಾಲರಾದ ಡಾ ಜಿ ಟಿ ರಾಜು ಅವರು ತಿಳಿಸಿದರು.

ಎಸ್ ಜೆ ಸಿ ಐ ಟಿ ಕಾಲೇಜ್‌ನಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭವು ಏಪ್ರಿಲ್ 24.2026 ರಂದು ಶುಕ್ರವಾರ ಪರಮಪೂಜ್ಯ ಜಗದ್ಗುರು ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿರವರ ದಿವ್ಯ ಸಾನಿಧ್ಯದಲ್ಲಿ ನೆರವೇರಲಿದೆ. ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳು ಮತ್ತು ಭಾಷಣಕಾರರಾಗಿ ಡಾ.ಯದತಿ ನರಹರಿ, ಪ್ರೋಫೇಸರ್, ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು, ಡಾ. ಪ್ರಶಾಂತ್ ಮಿಶ್ರಾ, ಹಿರಿಯ ವಿಜ್ಞಾನಿ, ಟಿ.ಸಿ.ಎಸ್, ಐಇಇಇ, ಬೆಂಗಳೂರು, ಡಾ.ತಮ್ಮೇಗೌಡ, ಹಿರಿಯ ವಿಜ್ಞಾನಿಗಳು, ಮೈಕ್ರೋಸಾಫ್ಟ್ ಟ್ರಾನ್ಸ್‌ಲೇಟರ್ ಇನ್ ರೆಡ್ ಮಾಂಡ್, ವಾಷಿಂಗ್‌ಟನ್ ಹಾಗೂ ಗೌರವ ಅತಿಥಿಗಳಾಗಿ ಮಂಜುನಾಥ ಬಚ್ಚೇಗೌಡ, ಎಕ್ಸಿಕ್ಯೂಟೀವ್ ಕೌನ್ಸಿಲ್ ಮೆಂಬರ್, ವಿಟಿಯು, ಬೆಳಗಾವಿ ರವರು ಭಾಗವಹಿಸಲಿದ್ದಾರೆ ಎಂದು ಹೇಳಿದರು.



ಈ ಅಂತರರಾಷ್ಟ್ರೀಯ ಸಮ್ಮೇಳನವು ವಿಶಾಲ ವ್ಯಾಪ್ತಿಯ ವಿಷಯಗಳಾದ ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಯಂತ್ರಕಲಿಕೆ, ಡೇಟಾ ಮೈನಿಂಗ್, ಜ್ಞಾನ ಅನ್ವೇಷಣೆ, ಇಂಟರ್‌ನೆಟ್ ಆಫ್ ಥಿಂಗ್ಸ್ (ಐ.ಓ.ಟಿ), ವೈರ್‌ಲೆಸ್ ಕಮ್ಯುನಿಕೇಷನ್ ನೆಟ್‌ವರ್ಕಿಂಗ್, ಕ್ಲೌಡ್ ಕಂಪ್ಯೂಟಿಂಗ್ ಇನ್ನೂ ಮುಂತಾದ ವಿಷಯಗಳ ಸಂಶೋಧನಾ ಜ್ಞಾನ ವಿನಿಮಯ, ಜ್ಞಾನ ಇಂಜಿನಿಯರಿಂಗ್ ಸಂವಹನ ವ್ಯವಸ್ಥೆಗಳಲ್ಲಿನ ವಿಕಸನಗೊಳ್ಳುತ್ತಿರುವ ಸವಾಲುಗಳ ವಿಷಯಗಳ ವಿನಿಮಯ ಮಾಡಿಕೊಳ್ಳಲಾಗುತ್ತದೆ. ಈ ಸಮ್ಮೇಳನದಲ್ಲಿ ವಿವಿಧ ದೇಶಗಳ ಸಂಶೋಧಕರು ಸಂಶೋಧನಾ ಲೇಖನಗಳನ್ನು ಪ್ರಸ್ತುತ ಪಡಿಸಲಿದ್ದಾರೆ ಮಾಹಿತಿ ನೀಡಿದರು.

ಈ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧಕರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಮತ್ತು ಉದ್ಯಮ ವೃತ್ತಿಪರರು, ಪ್ರಾಧ್ಯಾಪಕರು, ಗಣ್ಯರು ಭಾಗವಹಿಸಲಿದ್ದಾರೆ. ಜ್ಞಾನ ವಿನಿಮಯವು ತಂತ್ರಜ್ಞಾನ ಪ್ರಗತಿಗೆ ಪೂರಕವಾಗುವ ಅನ್ವೇಷಣೆಗಳ ಸಂವಾದದ ಮೂಲಕ ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯದ ಈ ಅಂತರ ರಾಷ್ಟ್ರೀಯ ಸಮ್ಮೇಳನ ಉತ್ತಮ ಕೊಡುಗೆಗೆ ಸಾಕ್ಷಿಯಾಗುತ್ತದೆ ಎಂದು ತಿಳಿಸಿದರು. ಸುದ್ದಿ ಗೋಷ್ಠಿಯಲ್ಲಿ ಆಡಳಿತಾಧಿಕಾರಿ ರಂಗಸ್ವಾಮಿ ಜಿ.ಆರ್ ಇದರು.